ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ಹಿರಿಯೂರು

ಸಿ.ಸಿ ನಂಃ 1484/2020

ಪಿರ್ಯಾದಿಃ ಹಿರಿಯೂರು ಗ್ರಾಮಾಂತರ ಪೋಲಿಸ್ ಠಾಣೆ

ವಿರುದ್ಧ

ಆರೋಪಿತರುಃ 1. ನರಸಿಂಹಣ್ಣ @ ನರಸಿಂಹಯ್ಯ
ತಂದೆ ನರಸಿಂಹಪ್ಪ , 55 ವರ್ಷ,
2. ಮಂಜುನಾಥ ತಂದೆ ನರಸಿಂಹಯ್ಯ , 51 ವರ್ಷ ,
ಇಬ್ಬರ ವಾಸಃ ಜೆ. ಜಿ ಹಳ್ಳಿ ಗ್ರಾಮ,
ಹಿರಿಯೂರು ತಾಲೂಕು.

ದೋಷಾರೋಪಣೆ

ನಾನು ಶ್ರೀ ಮೊಹಮ್ಮದ್ ಮೊಯಿನುದ್ದಿನ್, ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಹಿರಿಯೂರು, ಈ ಮೂಲಕ ನಿಮ್ಮನ್ನು ದೋಷಾರೋಪಣೆಗೆ ಗುರಿಪಡಿಸುವುದೇನೆಂದರೆ

ದಿಃ 28.12.2019 ರಂದು ಮಧ್ಯಾಹ್ನ 3.45 ರ ಸಮಯದಲ್ಲಿ ಹಿರಿಯೂರು ತಾಲೂಕು ಜವನಗೊಂಡನಹಳ್ಳಿ ಗ್ರಾಮದ ರಿ ಸ ನಂ 15/34 ರ ಜಮೀನಿನಲ್ಲಿ ಚಾಸಾ.1 ರವರು ತಮ್ಮ ಬಾಬ್ತು ಜಮೀನಿನಲ್ಲಿ ಬೆಳೆದಿರುವ ಗಿಡ ಗಂಟೆಗಳನ್ನು ಜೆ ಸಿ ಬಿ ಯಿಂದ ಅಚ್ಚುಕಟ್ಟು ಮಾಡಿಸುತ್ತಿರುವಾಗ 1 ಮತ್ತು 2 ನೇ ಆರೋಪಿತರಾದ ನೀವುಗಳು ಅಪರಾಧವೆಸಗುವ ಸಮಾನೋದ್ದೇಶದಿಂದ ಚಾಸಾ.1 ರವರ ಜಮೀನಿಗೆ ಅನುಮತಿ ಇಲ್ಲದೇ ಅಕ್ರಮ ಪ್ರವೇಶ ಮಾಡಿ ಏನೋ ಬೋಸುಡಿ ಸೂಳೆಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ಜಗಳ ಮಾಡಿ ಆ ಮೂಲಕ ಆರೋಪಿತರಾದ ನೀವುಗಳು ಭಾ ದಂ ಸಂ ಕಲಂ 447, 504 ಸಹವಾಚಕ 34 ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ .

2. ಮೇಲ್ಕಂಡ ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದವೆಸಗುವ ಸಮಾನೋದ್ದೇಶದಿಂದ ಬಂದು ಚಾಸಾ.1 ರವರನ್ನು ಹಿಡಿದು

ಎಳೆದಾಡಿ ಆಕೆಯ ಚಾರಿತ್ರ್ಯ ವಧೆ ಮಾಡಿ  ಕೈಗಳಿಂದ ಹೊಡೆದು ಕಾಲುಗಳಿಂದ ಒದ್ದು ನೋವುಂಟುಪಡಿಸಿ  ಆ ಮೂಲಕ ಆರೋಪಿತರಾದ  ನೀವು ಭಾ ದಂ ಸಂ ಕಲಂ 323, 354 ಸಹವಾಚಕ 34  ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ .

3. ಮೇಲ್ಕಂಡ  ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದವೆಸಗುವ ಸಮಾನೋದ್ದೇಶದಿಂದ ಬಂದು  ಚಾಸಾ.1 ರವರ ಜೊತೆ ಜಗಳ ಮಾಡಿ 1 ನೇ ಆರೋಪಿಯಾದ ನೀವು ಕಬ್ಬಿಣದ ಮಚ್ಚಿನಿಂದ ಚಾಸಾ.1 ರವರಿಗೆ ಹಲ್ಲೆ ಮಾಡಲು ಬಂದಿದ್ದು   ಆ ಮೂಲಕ ಆರೋಪಿತರಾದ  ನೀವು ಭಾ ದಂ ಸಂ ಕಲಂ 511 ಸಹವಾಚಕ 34  ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ .

4. ಮೇಲ್ಕಂಡ  ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅಪರಾದವೆಸಗುವ ಸಮಾನೋದ್ದೇಶದಿಂದ ಬಂದು  ಚಾಸಾ.1 ರವರ ಜೊತೆ ಜಗಳ ಮಾಡಿ ಈ ಜಮೀನಿಗೆ ಪುನಃ ಬಂದರೆ ನಿನ್ನನ್ನು ಇಲ್ಲೇ ಕೊಂದು ಸಮಾಧಿ ಮಾಡಿಬಿಡುತ್ತೇವೆ ಎಂದು ಪ್ರಾಣ ಬೆದರಿಕೆ ಹಾಕಿ  ಆ ಮೂಲಕ ಆರೋಪಿತರಾದ ನೀವು ಭಾ ದಂ ಸಂ ಕಲಂ 506 ಸಹವಾಚಕ 34  ರ ಅಡಿಯಲ್ಲಿ ದಂಡಿಸಲ್ಪಡುವ ಅಪರಾಧ ಎಸಗಿದ್ದೀರೆಂದು ಆರೋಪಿಸಲಾಗಿದೆ .

( ಮೇಲ್ಕಂಡ ಆರೋಪದ ಮೇಲೆ ಆರೋಪಿತರಾದ ನೀವುಗಳು ಈ ನ್ಯಾಯಾಲಯದಿಂದ ವಿಚಾರಣೆಗೆ ಗುರಿಯಾಗಿರುತ್ತೀರೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ .)

ದಿನಾಂಕಃ **16.08.2023**
ಸ್ಥಳಃ ಹಿರಿಯೂರು

(ಮಹಮ್ಮದ್ ಮೊಯಿನುದ್ದಿನ್)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಹಿರಿಯೂರು